ಓಂ ಹ್ರೀಂ ಶ್ರೀಂ

# ಶ್ರೀವಾಸವಿ ಕನ್ಯಕಾದೇವಿ ಪುರಾಣ

## ಚತುರ್ಥಾಧ್ಯಾಯ

## ಪರಾಂಬಿಕಾ ಪರಂಧಾಮ: ದೇವಿ ಕಥೆಯ ಶ್ರವಣ ಫಲ:

ಪಾವನವಾದ ಅಪೂರ್ವ ವಿಷಯಗಳನ್ನು ಕೇಳಿದ ಮಣಿಗುಪ್ತಾದಿಗಳಿಗೆ ಆನಂದದಿಂದ ಹೃದಯಕಮಲಗಳು ಅರಳಿದವು. ಅವರು ಸಾಲಂಕಾಯನ ಮುನಿಗಳೊಡನೆ, "ಓ ಗುರುಶ್ರೇಷ್ಠರೇ! ಆದಿಶಕ್ತಿಯ ಮಹಿಮೆಯನ್ನು ಎಷ್ಟು ಕೇಳಿದರೂ ಮನ ತಣಿಯುತ್ತಿಲ್ಲ. ಸೃಷ್ಟಿಸ್ಥಿತಿಲಯಗಳಿಗೆ ಮೂಲಕಾರಣಳೂ, ಅಖಿಲಾಂಡ ಕೋಟಿಬ್ರಹ್ಮಾಂಡ ನಾಯಕಿಯೂ ಆದ ಆ ದೇವದೇವಿಯ ವಿಶೇಷವೈಭವನ್ನು, ಆ ಜಗನ್ಮಾತೆಯ ಘನತೆಯನ್ನು ವಾತ್ಸಲ್ಯದಿಂದ ನಮಗೆ ತಿಳಿಸಿಕೊಡಿ," ಎಂದು ಬೇಡಿಕೊಂಡರು. ಆಗ ಸಾಲಂಕಾಯನ ಋಷಿಗಳು, ಪೂರ್ವದಲ್ಲಿ ನೀವು ಕೇಳಿದಂತೆಯೇ ಶೌನಕಾದಿ ಮುನಿಗಳು ಸೂತಮೌನಿಯನ್ನು ಕೇಳಿದರು. ಸೂತನು ಆ ಮುನಿಗಳಿಗೆ ದೂರ್ವಾಸ ಮಹರ್ಷಿಯು ಮಾಡಿದ ಶ್ರೀಚಕ್ರನಗರ ವರ್ಣನೆಯಲ್ಲಿರುವ ದೇವ್ಯಾವಾಸ ವೈಭವವನ್ನು ಕುರಿತು ವ್ಯಾಸಪ್ರೋಕ್ತವಾದ ಮಾರ್ಕಂಡೇಯ ಪುರಾಣದಲ್ಲಿಯ ದೇವಿ ಕಥೆಗಳನ್ನು ತಿಳಿಸಿದರು. ನಾನೀಗ ಆ ವಿಷಯಗಳನ್ನು ನಿಮಗೆ ಹೇಳುವೆ. ನೀವು ಭಕ್ತಿಶ್ರದ್ಧೆಗಳಿಂದ ಕೇಳಿ ಧನ್ಯಜೀವಿಗಳಾಗುವಿರಿ. ಈ ದೇವಿ ಮಹತ್ತರ ಕಥೆಗಳನ್ನು ಪ್ರಧಾನವಾಗಿ ದೇವಿ ಶರನ್ನವರಾತ್ರಿ ಉತ್ಸವಗಳ ಸಮಯದಲ್ಲಿ ಅಷ್ಟಮಿ, ನವಮಿ, ದಶಮಿ, ತಿಥಿಗಳಲ್ಲಿ ಪಠಿಸುವವರಿಗೆ ಸರ್ವ ಸೌಭಾಗ್ಯಗಳು ಕೈಗೂಡುವುವು. ತನ್ನ ದಿವ್ಯಕಥಾ ಶ್ರವಣದಿಂದ ಉಂಟಾಗುವ ಫಲಿತಗಳನ್ನು ಕುರಿತು ಸ್ವಯಂ ಪರಾಶಕ್ತಿಯೇ ಹೀಗೆ ಹೇಳಿದಳು. "ಯಾರು ನನ್ನನ್ನು ನಿಶ್ಚಲಚಿತ್ತದಿಂದ ಸದಾ ಸ್ತುತಿಸುವರೋ ಅವರ ಸಮಸ್ತ ಬಾಧೆಗಳನ್ನು ನಾನು ನಿಸ್ಸಂಶಯವಾಗಿ ನಿವಾರಿಸುವೆನು. ಹಾಗೆಯೇ ಮಧುಕೈಟಭನಾಶನ, ಮಹಿಷಾಸುರ ಮರ್ದನ, ಶುಂಭನಿಶುಂಭವಧೆ ಇವುಗಳನ್ನು ಕುರಿತ ಕಥೆಗಳನ್ನು ಮತ್ತು ನನ್ನ

ಆ ತಾಯಿಯನ್ನು ಆರಾಧಿಸುತ್ತಿರುವುವು. ಓ ಮುನಿವರರೇ ! ಸರ್ವಲೋಕಗಳಲ್ಲಿ ಉತ್ತಮೋತ್ತಮವೂ ದಿವ್ಯವೂ ಪರಂಧಾಮವೂ ಮಹತ್ತಮವೂ ಆದ ಶ್ರೀದೇವಿಯ ಆವಾಸವೈಭವವನ್ನು ಮತ್ತು ದೇವಿಯ ರೂಪವೈಭವವನ್ನು ನಿಮಗೆ ಅತ್ಯಂತ ಸಂಕ್ಷಿಪ್ತವಾಗಿ ಸಾರಭೂತವಾಗಿ ತಿಳಿಸಿಕೊಟ್ಟೆನು. ನೂತನ ಗೃಹಾರಂಭ ಸಮಯದಲ್ಲಿ ಆಚರಿಸುವ ವಾಸ್ತುಹೋಮಗಳಲ್ಲಿ, ಗೃಹಪ್ರವೇಶ ಸಮಯಗಳಲ್ಲಿ ಈ ವಿಷಯವನ್ನು ಪಠಿಸುವವರು, ಕೇಳುವವರು ಸಮಸ್ತ ಶುಭಗಳನ್ನು ಹೊಂದಬಲ್ಲರು.

ಹೀಗೆ ದೇವೀ ಆವಾಸವೈಭವವನ್ನು ಕುರಿತು ಅರುಹಿದ ಸಾಲಂಕಾಯನ ಮಹರ್ಷಿಗಳು ಮಣಿಗುಪ್ತಾದಿಗಳೊಡನೆ, "ಓ ! ವೈಶ್ಯೋತ್ತಮರೇ ! ಮತ್ತೊಂದು ಮುಖ್ಯವಿಷಯವನ್ನು ಕೇಳಿರಿ. ಶಿಷ್ಟರಕ್ಷಣ, ದುಷ್ಟಶಿಕ್ಷಣ ಮಾಡುವ ಆದಿಪರಾಶಕ್ತಿಯದು ಮಹಾದ್ಭುತ ಕಥೆಗಳು. ಪೂರ್ವದಲ್ಲಿ ಮೇಧಸನೆಂಬ ಮಹಾಮುನಿಗೂ, ಸುರಥನೆಂಬ ರಾಜನಿಗೂ, ಸಮಾಧಿ ಎಂಬ ವೈಶ್ಯೋತ್ತಮನಿಗೂ ಆ ವೈಶ್ಯವಂಶ ಪಾದೋಧಿಚಂದ್ರನ ಕಾರಣವಾಗಿ ಹೊರಬಂದ ದೇವೀ ಮಹಿಮೆಯ ಕಥೆಗಳು ವೇದವ್ಯಾಸಕೃತವಾದ ಮಾರ್ಕಂಡೇಯ ಪುರಾಣದಲ್ಲಿ ಸವಿಸ್ತಾರವಾಗಿ ವರ್ಣಿಸಲ್ಪಟ್ಟು ಪ್ರಸಿದ್ಧವಾಗಿ ಮೋಕತಾರಕಗಳಾಗಿವೆ. **ಆ ಸಮಾಧಿಯಿಂದ ವೈಶ್ಯವಂಶವೇ ಪುನೀತವಾಯಿತು,"** ಎಂದು ಹೇಳಿದರು.

ಆ ವಚನಗಳನ್ನು ಕೇಳಿದ ಮಣಿಗುಪ್ತಾದಿಗಳು, " ಗುರುವರ! ನಮ್ಮ ವಂಶದಲ್ಲಿ ಉದ್ಭವಿಸಿದ ಆ ಸಮಾಧಿ ಎಂಬ ಹೆಸರಿನ ಪಾವನಮೂರ್ತಿಯ ದಿವ್ಯಚರಿತ್ರೆಯನ್ನು ಆದಿಪರಾಶಕ್ತಿಯು ಮಾಡಿದ ದುಷ್ಟದಮನ ಕಥೆಗಳನ್ನು ದಯೆಮಾಡಿ ನಮಗೆ ತಿಳಿಸಿಕೊಡಿ," ಎಂದು ವಿನಯಪೂರ್ವಕವಾಗಿ ಕೇಳಿಕೊಂಡರು. ಆಗ ಸಾಲಂಕಾಯನ ಮುನಿಯು ವಾತ್ಸಲ್ಯಪೂರ್ಣ ಹೃದಯದಿಂದ ಹೀಗೆ ಹೇಳಿದರು.

## ಸಮಾಧಿನಾಮದ ವೈಶ್ಯೋತ್ತಮನ ವೃತ್ತಾಂತ:

ಪೂರ್ವದಲ್ಲಿ ಚೈತ್ರವಂಶದಲ್ಲಿ ಹುಟ್ಟಿದ ಸುರಥ ಎಂಬ ರಾಜನು ಸಮಸ್ತ ಭೂಮಂಡಲವನ್ನು ಪಾಲಿಸುತ್ತಿದ್ದನು. ಆ ಸುರಥ ಮಹಾರಾಜನಿಗೆ ಕೋಲಾವಿಧ್ವಂಸರೆಂದು ಪ್ರಸಿದ್ಧಿ ಹೊಂದಿದ್ದ ರಾಜರು ಪ್ರಬಲ ಶತೃಗಳಾದರು. ಅವರೊಡನೆ ಸುರಥನಿಗೆ ಸಮರವು ಸಂಭವಿಸಿತು. ಆ ಕೋಲಾವಿಧ್ವಂಸರಿಂದ ಅನ್ಯಾಯಯುದ್ಧದಲ್ಲಿ ಸೋಲಿಸಲ್ಪಟ್ಟ ಸುರಥನು ಒಂದು ಅಶ್ವವನ್ನು ಹತ್ತಿ ಒಂದು ಘೋರಾರಣ್ಯಕ್ಕೆ ಹೋದನು. ಆ ಅಡವಿಯಲ್ಲಿ ಪಶು ಪಕ್ಷ್ಯಾದಿಗಳಿಂದ ಶೋಭಿಸುತ್ತಿದ್ದ ಮುನಿಶಿಷ್ಯರಿಂದ ವಿರಾಜಿಸುತ್ತಿದ್ದ ಪ್ರಶಾಂತವಾದ ಮೇಧಸ ಮುನಿಯ ಆಶ್ರಮವನ್ನು ನೋಡಿದನು. ಅಲ್ಲಿ ಮೇಧಸ ಮುನಿಯಿಂದ ಸತ್ಕರಿಸಲ್ಪಟ್ಟು ಸ್ವಲ್ಪಕಾಲ ಆ ಆಶ್ರಮದಲ್ಲಿದ್ದು ಬಳಿಕ ಮಮಕಾರದಿಂದ ಆಕರ್ಷಿಸಲ್ಪಟ್ಟ ಮನಸ್ಸಿನವನಾಗಿ ತಾನು ಕಳೆದುಕೊಂಡ ರಾಜ್ಯಸಂಪದಗಳನ್ನು ಪ್ರಜೆಗಳನ್ನು ಕುರಿತು ಸದಾಕಾಲ ಚಿಂತಿಸುತ್ತ ಆ ಮುನಿಯ ಆಶ್ರಮದಲ್ಲಿ ಅತ್ತಿತ್ತ ತಿರುಗಾಡುತ್ತಿದ್ದನು.

ಒಂದು ದಿನ ಅವನು ಆ ಆಶ್ರಮ ಪ್ರಾಂತ್ಯದಲ್ಲಿ ಒಬ್ಬ ವೈಶ್ಯನನ್ನು ನೋಡಿ," ಆರ್ಯಾ ! ತಾವು ಯಾರು! ಇಲ್ಲಿಗೆ ಬಂದ ಕಾರಣವೇನು? ಶೋಕಗ್ರಸ್ತರಂತೆ ಏಕೆ ಖಿನ್ನರಾಗಿ ಕಾಣಿಸುತ್ತಿದ್ದೀರಿ?," ಎಂದು ಪ್ರಶ್ನಿಸಿದನು. ಸ್ನೇಹಪೂರ್ವಕವಾದ ಆ ವಾಕ್ಯಗಳನ್ನು ಕೇಳಿ ಆ ವೈಶ್ಯನು ವಿನಯದಿಂದ," ರಾಜಾ! ನಾನು ಸಂಪನ್ನ ವಂಶದಲ್ಲಿ ಜನ್ಮಿಸಿದ ಸಮಾಧಿ ಎಂಬ ವೈಶ್ಯನು. ನಾನು ಮಾಡುವ ನಿರಂತರ ದಾನಧರ್ಮಾದಿಗಳು ಹಿಡಿಸದ ಧನಲೋಲುಪರಾದ ಪುತ್ರಮಿತ್ರಾದಿಗಳಿಂದ ಹೊರದೂಡಲ್ಪಟ್ಟು ಈ ಅರಣ್ಯಕ್ಕೆ ಆಗಮಿಸಿರುವೆ. ಇಲ್ಲಿರುವುದರಿಂದ ನನ್ನ ಪುತ್ರಾದಿಗಳ ಕುಶಲಾಕುಶಲಗಳು ನನಗೇನೂ ತಿಳಿಯುತ್ತಿಲ್ಲ. ನನ್ನ ಮನಸ್ಸು ಸದಾ ಅವರ ಯೋಗಕ್ಷೇಮಗಳನ್ನು ಕುರಿತೇ ಆಲೋಚಿಸುತ್ತಿರುವುದು. ಓ ರಾಜಾ! ದುಷ್ಟಸ್ವಭಾವದ ನನ್ನ ಸುತಾದಿಗಳಲ್ಲಿ ಈ ರೀತಿ ನನ್ನ ಚಿತ್ತವು ಪ್ರೇಮಪೂರಿತವಾಗಿರುವುದು ಅನುಚಿತವೆಂದು ತಿಳಿದರೂ ನನಗೇಕೆ ಹೀಗೆ ಚಿಂತೆಯುಂಟಾಗುತ್ತಿದೆಯೋ ತಿಳಿಯದಾಗಿರುವೆ," ಎಂದು ಪ್ರತ್ಯುತ್ತರ ನೀಡಿದನು.

ಆಗ ಸುರಥನೂ, ಸಮಾಧಿಯೂ ಮೇಧಸ ಮುನಿಯ ಬಳಿಗೆ ಹೋಗಿ ತಮ್ಮ

ವೃತ್ತಾಂತಗಳನ್ನು ತಿಳಿಸಿ ಆ ಮುನಿಸತ್ತಮನಿಗೆ ವಿದ್ಯುಕ್ತವಾಗಿ ಸತ್ಕಾರಮಾಡಿ," ಓ ಮುನೀಶ್ವರಾ ! ನಾನು ರಾಜ್ಯವನ್ನು ಕಳೆದುಕೊಂಡವನಾಗಿಯೂ, ಆ ರಾಜ್ಯದ ಬಗ್ಗೆಯೇ ಮಮಕಾರವನ್ನು ಹೊಂದಿರುವೆನು. ಈತನು ಪುತ್ರಾದಿಗಳಿಂದ ದೂಡಲ್ಪಟ್ಟರೂ ಸದಾ ಅವರಲ್ಲೇ ಅನುರಕ್ತನಾಗಿರುವನು. ಹೀಗೆ ನಾವಿಬ್ಬರೂ ಆಯಾ ವಿಷಯಗಳಲ್ಲಿಯ ದೋಷಗಳನ್ನು ನೋಡುತ್ತಿದ್ದರೂ ಅವುಗಳಲ್ಲಿ ಮಮಕಾರನನ್ನು ಹೊಂದಿ ಅಪಾರ ದುಃಖಕ್ಕೆ ವಶರಾಗಿದ್ದೇವೆ ಓ! ಮಹಾನುಭಾವ ! ವಿಶೇಷವಂತರಾದರೂ ನಮಗೀ ಮೂಢತ್ವ ಏಕೆ ಉಂಟಾಯಿತು? ಜ್ಞಾನವಂತರಿಗೂ ಕೂಡ ಈ ಮೋಹ ಹೇಗೆ ಸಂಭವಿಸುತ್ತಿರುವುದು ? ಹೀಗಾಗಲು ಕಾರಣವೇನು? ಕೃಪೆಮಾಡಿ ತಿಳಿಯಪಡಿಸಿರಿ," ಎಂದು ಬೇಡಿಕೊಂಡರು.

ಆ ಬಳಿಕ ಮೇಧಸ ಮುನಿಯು, "ಪ್ರಿಯಪುತ್ರರೇ ! ಇಂದ್ರಿಯ ಗೋಚರವಾದ ವಿಷಯಜ್ಞಾನವು ಸಮಸ್ತ ಪ್ರಾಣಿಗಳಿಗೂ ಉಂಟು. ಮೋಹಪೂರಿತವಾದ ಅಜ್ಞಾನವು ಮಾನವರಿಗೂ ಇತರ ಪಶುಪಕ್ಷಿಗಳಿಗೂ ಸಮಾನವು. ಸೃ ಷ್ಟಿಸ್ಥಿತಿಲಯಕಾರಿಣಿಯಾದ ಆ ಮಹಾಮಾಯೆಯ ಪ್ರಭಾವದಿಂದ ಎಲ್ಲಕಾಲವೂ ಈ ಸಮಸ್ತ ಸೃಷ್ಟಿಯು ಬಲವಂತವಾಗಿ ಮೋಹಗೋಳ್ಳುತ್ತಿದೆ. ಭಗವತಿಯಾದ ಆ ದೇವಿಯು ಜ್ಞಾನಿಗಳನ್ನು ಕೂಡ ಬಲವಂತವಾಗಿ ಆಕರ್ಷಿಸಿ ಮಮತೆಯೆಂಬ ಸುಳಿಗೆ ಸಿಲುಕಿಸುತ್ತಿರುವಳು. ಮಾಯೆ, ಯೋಗನಿದ್ರೆ, ಯೋಗಮಾಯೆ, ಕನ್ಯೆ ಎಂದು ಕರೆಯಲ್ಪಟ್ಟಿರುವ ಆ ಪರಾಶಕ್ತಿಯು ನಿರ್ಗುಣವಾದ ಬ್ರಹ್ಮರೂಪವಿರುವವಳು. ಗುಣಾತ್ಮಕವಾದ ಪ್ರಕೃತಿರೂಪವಿರುವವಳೂ ಆಗಿರುವಳು ಆಕೆಯಿಂದಲೇ ಈ ಚರಾಚರ ಜಗತ್ತೆಲ್ಲಾ ಸೃಜಿಸಲ್ಪಡುತ್ತಿದೆ. ಪ್ರಸನ್ನಳಾದ ವರದಾಯಿನಿಯಾದ ಆ ದೇವಿಯೇ ಮಾನವರಿಗೆ ಮುಕ್ತಿದಾಯಿನಿಯಾಗಿರುವಳು," ಎಂದು ತಿಳಿಸಿದರು. ಆಗ ಆ ಸುರಥ ಸಮಾಧಿಗಳು," ಓ ಮಹಾಮುನಿ! ತಾವು ಮಹಾಮಾಯೆ ಎಂದು ಯೋಗಮಾಯಾ ಕನ್ಯೆಯೆಂದು ತಿಳಿಸುತ್ತಿರುವ ಆ ದೇವಿ ಯಾರು? ಆಕೆಯ ಮಹಿಮೆಯನ್ನು ಕುರಿತು ಸವಿಸ್ತಾರವಾಗಿ ತಿಳಿಸಿರಿ," ಎಂದು ಪ್ರಾರ್ಥಿಸಿದರು. ಆಗಮೇಧಸನು ಅವರೊಡನೆ," ಓ ಮಾನವೋತ್ತಮರೇ ! ಹಿಂದೆ ಮಾರ್ಕಂಡೇಯ ಮಹರ್ಷಿಗೆ ಬ್ರಹ್ಮನು ನುಡಿದ ವಿಧದಲ್ಲಿ

ದೇವೀಮಾಹಾತ್ಮೆಯನ್ನು ಇಂದು ನಿಮಗೆ ಹೇಳುತ್ತಿರುವೆನು. ಸಾವಧಾನ ಚಿತ್ತರಾಗಿ ಕೇಳಿರಿ. ಕಾಲಾಂತ್ಯದಲ್ಲಿ ಜಗತ್ತೆಲ್ಲವೂ ಏಕವಾಗಿ ಪ್ರಳಯಜಲರಾಶಿರೂಪದಲ್ಲಿರುವಾಗ ಭಗವಾನ್ ಶ್ರೀಮಹಾವಿಷ್ಣುವು ಶೇಷತಲ್ಪಶಾಯಿಯಾಗಿ ಯೋಗನಿದ್ರೆಯಲ್ಲಿದ್ದನು. ವಿಷ್ಣುದೇವನ ಕಿವಿಯಲ್ಲಿದ್ದ ಮಾಲಿನ್ಯದಿಂದ ಮಧುಕೈಟಭರೆಂಬ ರಾಕ್ಷಸರೀರ್ವರು ಉದಯಿಸಿ ಬ್ರಹ್ಮನನ್ನು ವಧಿಸಲು ಯತ್ನಿಸಿದರು. ವಿಷ್ಣುನಾಭಿಕಮಲದಲ್ಲಿ ಕುಳಿತಿದ್ದ ಪ್ರಜಾಪತಿಯಾದ ಬ್ರಹ್ಮನು ಮಹೋಗ್ರರಾದ ರಕ್ಕಸರೀರ್ವರನ್ನು ಮತ್ತು ನಿದ್ರಿಸುತ್ತಿದ್ದ ಮಹಾವಿಷ್ಣುವನ್ನು ನೋಡಿ, ಆ ವಿಷ್ಣುವನ್ನು ಎಚ್ಚರಗೊಳಿಸಲು ಆತನ ನೇತ್ರಗಳಲ್ಲಿ ವಾಸಿಸುತ್ತಿರುವ ವಿಶ್ವೇಶ್ವರಿಯೂ, ಸೃಷ್ಟಿ ಸ್ಥಿತಿ ಲಯಗಳಿಗೆ ಮೂಲಳೂ, ವಿಷ್ಣುವನ್ನು ವಶಪಡಿಸಿಕೊಂಡಿರುವವಳೂ ಆದ ನಿದ್ರಾದೇವಿಯನ್ನು ಏಕಾಗ್ರಚಿತ್ತನಾಗಿ ಹೀಗೆ ಸ್ತುತಿಸಿದನು.

'ಓ ದೇವಿ! ನೀನು ಸ್ವಾಹಾಮಂತ್ರವು, ಸ್ವಧಾ ಮಂತ್ರವು, ಸ್ವರಗಳಿಗೆ ಮೂರ್ತಿಯು, ವಷಟ್ಕಾರಳೂ ನೀನೇ; ಸುಧೆಯು ನೀನೇ; ನಾಶರಹಿತಳೂ, ಶಾಶ್ವತಳೂ ನೀನೇ; ತ್ರಿಮಾತ್ರಾತ್ಮಕವಾದ ಓಂಕಾರಿಣಿಯೂ ಪೂರ್ಣವಾಗಿ ಉಚ್ಚರಿಸಲಾಗದ ನಿತ್ಯಸ್ವರೂಪಿಣಿಯಾದ ಅರ್ಧಮಾತ್ರಳೂ ನೀನೇ; ದೇವತೆಗಳ ಜನನಿಯೂ ಪರದೇವತೆಯಾದ ಸಾವಿತ್ರಿಯೂ ನೀನೇ; ನೀನೇ ಸರ್ವಕ್ಕೂ ಮೂಲಕಾರಣಳಾದ ಪ್ರಕೃತಿಯು; ತ್ರಿಗುಣಗಳನ್ನು ಪ್ರವರ್ತಿಸುವಂತೆ ಮಾಡುವವಳು, ಕಲ್ಪಾಂತ ಪ್ರಳಯಕಾಲದ ಕಾಳರಾತ್ರಿಯೂ, ಅಂತಿಮಪ್ರಳಯಕಾಲದ ಮಹಾರಾತ್ರಿಯೂ, ಮಹಾಭಯಂಕರವಾದ ಮೋಹರಾತ್ರಿಯೂ ನೀನೇ; ನೀನೇ ಲಕ್ಷ್ಮಿಯೂ, ಈಶ್ವರಿಯೂ, ವಿನಮ್ರತೆಯೂ, ಪ್ರಬೋಧಪ್ರದವಾದ ಜ್ಞಾನಚಿನ್ಹವಾದ ಬುದ್ಧಿಯೂ ನೀನೇ; ನೀನೇ ಲಜ್ಜೆ, ಪುಷ್ಟಿ; ಈಶ್ವರನನ್ನು ಶರೀರಧಾರಿಗಳಾಗಿಸಿದ ನಿನ್ನನ್ನು ಸ್ತುತಿಸುವ ಶಕ್ತಿ ಯಾರಿಗಿದೆ? ಓ ದೇವಿ! ಇಂಥ ಉದಾರ ಶಕ್ತಿಸಂಪನ್ನಳಾದ ನೀನು ಈ ಅಪ್ರತಿಹತರಾದ ಮಧುಕೈಟಭಾಸುರರನ್ನು ಈ ಮಹಿಮೆಯಿಂದ ಸಮ್ಮೋಹಿತಗೊಳಿಸು. ಜಗತ್ಸ್ವಾಮಿಯಾದ ಅಚ್ಯುತನು ತ್ವರಿತವಾಗಿ ಎಚ್ಚರಗೊಂಡು ಈ ಮಹಾಸುರರನ್ನು ವಧಿಸುವಂತೆ ಮಾಡು,' ಎಂದು ಬ್ರಹ್ಮನಿಂದ ಹೀಗೆ ಸ್ತುತಿಸಲ್ಪಟ್ಟು ಯೋಗನಿದ್ರಾದೇವಿಯು ವಿಷ್ಣುದೇವನ ಸರ್ವಾಂಗಗಳಿಂದ ನಿರ್ಗಮಿಸಿದಳು.

ವಿಷ್ಣುವು ನಿದ್ರೆಯಿಂದ ಎಚ್ಚರಗೊಂಡನು. ತರುವಾಯ ಆ ಜಗನ್ನಾಥನು ದುರಾತ್ಮರೂ ಅತಿ ಪರಾಕ್ರಮವಂತರೂ ಕ್ರೋಧಾರುಣನೇತ್ರರೂ ಆಗಿ ಬ್ರಹ್ಮನನ್ನು ನುಂಗಲು ಪ್ರಯತ್ನಿಸುತ್ತಿದ್ದ ಮಧುಕೈಟಭರನ್ನು ನೋಡಿದನು. ಆಗ ವಿಷ್ಣುವು ತನ್ನ ಕರಗಳನ್ನು ಆಯುಧಗಳನ್ನಾಗಿ ಮಾಡಿ ಐದುಸಾವಿರ ಸಂವತ್ಸರಗಳು (5000) ಅವರೊಡನೆ ಯುದ್ಧಮಾಡಿದನು. ಆಗ ಬಲಗರ್ವಿತರಾದ ಮಹಾಮಾಯಾಸಂಮೋಹಿತರಾದ ಆ ಮಧುಕೈಟಭರು ಜನಾರ್ದನನೊಡನೆ,' ಎಲವೋ! ನೀನು ನಮ್ಮಿಂದ ವರವೊಂದನ್ನು ಕೇಳು,' ಎಂದರು. ಆಗ ಭಗವಂತನು ಅವರೊಡನೆ,'ಓ ಅಸುರರೇ! ನನ್ನಲ್ಲಿ ನೀವು ಸಂತುಷ್ಟರಾಗಿರುವಿರಾದರೆ ಇಂದು ನನ್ನಿಂದ ವಧಿಸಲ್ಪಡಿರಿ. ನನಗೀಗ ಅನ್ಯವರದಿಂದ ಪ್ರಯೋಜನವೇನು? ಆದ್ದರಿಂದ ನಾನು ಇದೇ ವರ ಕೋರುವೆ,' ಎಂದು ವರವನ್ನು ಕೋರಿದನು.

ಹೀಗೆ ವಂಚಿತರಾದ ಆ ರಾಕ್ಷಸರಿಬ್ಬರು ಜಲಮಯವಾದ ಸರ್ವಜಗತ್ತನ್ನು ನೋಡಿ ಕಮಲಾಕ್ಷನೊಡನೆ ಎಲ್ಲಿ ಭೂಮಿ ಮುಳುಗಿರುವುದಿಲ್ಲವೋ ಅಲ್ಲಿ ನಮ್ಮನ್ನು ಸಂಹರಿಸು ಎಂದು ಕೇಳಿದರು. ಆಗ ಭಗವಂತನು ಹಾಗೆಯೇ ಆಗಲಿ ಎಂದು ನುಡಿದು ಶಂಖಚಕ್ರ ಗಧಾಧಾರಿಯಾಗಿ ತನ್ನ ತೊಡೆಗಳ ಮೇಲೆ ಇರಿಸಿಕೊಂಡು ಅವರ ಶಿರಸ್ಸುಗಳನ್ನು ಛೇದಿಸಿದನು.

ಹೀಗೆಂದು ಹೇಳಿ ಮೇಧಸ ಋಷಿಯು ಸಮಾಧಿ, ಸುರಥರೊಡನೆ, 'ಕುಮಾರರೇ! ದೇವಿಯ ಶ್ರೇಷ್ಠವಾದ ಈ ಮಹಾತ್ಮೆಯನ್ನು ನಿಮಗೀಗ ತಿಳಿಸಿದೆನು. ದೇವಿಯು ಅಂಥಹ ಪ್ರಭಾವಸಂಪನ್ನಳಾಗಿರುವಳು. ಓ ಧೀರವರರೇ! ಆ ಪರಮೇಶ್ವರಿಯಲ್ಲಿ ಶರಣಾಗಿರಿ. ತನ್ನನ್ನು ಪೂಜಿಸುವವರಿಗೆ ಆ ದೇವಿಯೇ ಭೋಗವನ್ನು ಸ್ವರ್ಗವನ್ನು ಮೋಕ್ಷವನ್ನು ಪ್ರಸಾದಿಸುವಳು. ಮಮಕಾರದಿಂದಲೂ ರಾಜ್ಯಭ್ರಂಶದಿಂದಲೂ ಖಿನ್ನರಾಗಿದ್ದ. ವೈಶ್ಯಮುನಿ ಸಮಾಧಿಯು ತನ್ನ 102 ಗೋತ್ರದವರಿಗೆ ಮುಕ್ತಿಯನ್ನು ಪ್ರಸಾದಿಸೆಂದುನ ಪ್ರಾರ್ಥಿಸಲು ಆದಿಪರಾಶಕ್ತಿಯು ಬರಲಿರುವ ಜನ್ಮದಲ್ಲಿ ನಿನ್ನ ಪುತ್ರಿಯಾಗಿ ಅವತರಿಸಿ ಮೋಕ್ಷವನ್ನು ನೀಡುವೆನೆಂದು ವರನೀಡುತ್ತಿರುವುದು.



ವೈಶ್ಯಮುನಿ ಸಮಾಧಿಯು ತನ್ನ 102 ಗೋತ್ರದವರಿಗೆ ಮುಕ್ತಿಯನ್ನು ಪ್ರಸಾದಿಸೆಂದು ಪ್ರಾರ್ಥಿಸಲು ಆದಿಪರಾಶಕ್ತಿಯು ಬರಲಿರುವ ಜನ್ಮದಲ್ಲಿ ನಿನ್ನ ಪುತ್ರಿಯಾಗಿ ಅವತರಿಸಿ ಮೋಕ್ಷವನ್ನು ನೀಡುವೆನೆಂದು ವರನೀಡುತ್ತಿರುವುದು.

ಆ ಸುರಥ ನೃಪಾಲನು ಮತ್ತು ಸಮಾಧಿ ವೈಶ್ಯನು ಆ ವಚನಗಳನ್ನು ಕೇಳಿ ಮೇಧಸನಿಗೆ ಪ್ರಣಾಮಗೈದು ತಪಸ್ಸನ್ನಾಚರಿಸಲು ಕೂಡಲೇ ಹೊರಟರು.

ಅಂಬಾಸಂದರ್ಶನಾರ್ಥವಾಗಿ ಆ ವೈಶ್ಯನೂ, ರಾಜನೂ ಒಂದು ನದೀ ತೀರದಲ್ಲಿ ಮರಳುದಿಬ್ಬದ ಮೇಲೆ ಕುಳಿತು, ಶ್ರೇಷ್ಠವಾದ ದೇವೀಸೂಕ್ತವನ್ನು ಜಪಿಸುತ್ತ ತೀವ್ರವಾದ ತಪವನ್ನಾಚರಿಸಿದರು. ಆಹಾರವನ್ನು ಸ್ವೀಕರಿಸದೆ ದೇವಿಯಲ್ಲೇ ಮನಸ್ಸನ್ನು ನಿಲ್ಲಿಸಿ ಏಕಾಗ್ರ ಚಿತ್ತದಿಂದ ಅವರಿಬ್ಬರೂ ತಮ್ಮ ಶರೀರದ ತೀವ್ರಸ್ರಾವದ ರಕ್ತಬಿಂದುಗಳನ್ನು ಸಮರ್ಪಿಸಿದರು. ಲೋಕರಕ್ಷಕಳಾದ ಚಂಡಿಕೆಯು ಅವರ ಘೋರ ತಪಸ್ಸಿಗೆ ಸಂತುಷ್ಟಳಾಗಿ ಪ್ರತ್ಯಕ್ಷಳಾಗಿ 'ಬೇಕಾದ ವರಗಳನ್ನು ಕೇಳಿಕೊಳ್ಳಿರಿ', ಎಂದು ನುಡಿದಳು. ಸುರಥರಾಜನು 'ತಾನು ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆಯುವಂತೆ ಅನುಗ್ರಹಿಸೆಂದು' ವರವನ್ನು ಬೇಡಿದನು ಆದರೆ ಮೇಧಸ ಋಷಿಯ ಬೋಧೆಯಿಂದ ಜ್ಞಾನಹೊಂದಿನ ವಿರಕ್ತಚಿತ್ತನೂ ಪ್ರಾಜ್ಞನೂ ಆದ ಸಮಾಧಿ ವೈಶ್ಯನು

‘ತನಗೂ ತನ್ನ ಬಂಧುವರ್ಗವಾದ 102 ಗೋತ್ರದವರಿಗೂ ಮೋಕ್ಷವನ್ನು ಪ್ರಸಾದಿಸೆಂದು,’ ಆ ಜಗನ್ಮಾತೆಯಲ್ಲಿ ವರವನ್ನು ಬೇಡಿದನು. ಆಗ ದೇವಿಯು ಸಮಾಧಿಯನ್ನು ನೋಡಿ,’ ವತ್ಸ ! ನಿನ್ನ ತಪಸ್ಸಿನಿಂದ ಮಿಗಿಲಾಗಿ ಸಂಪ್ರೀತಳಾಗಿರುವೆನು. ಆದರೂ ನಿನ್ನ ಬಂಧುವರ್ಗದವರೆಲ್ಲ ಮೋಕ್ಷಪಡೆಯಬೇಕೆಂದರೆ ಅವರೆಲ್ಲರಿಗೂ ಕರ್ಮಫಲ ನಿಶ್ಶೇಷವಾಗಬೇಕು. ನೀನು ಈಗ ಕಾಮನೆಯಿಂದ ಬಂಧಿತನಾಗಿರುವೆ,. ಆದ್ದರಿಂದ ನೀನು ಮತ್ತೆ ಕೆಲವು ಜನ್ಮಗಳನ್ನು ಹೊಂದಿದ ಬಳಿಕವೇ ಪೂರ್ಣಮುಕ್ತಿಯನ್ನು ಹೊಂದಬಲ್ಲೆ. ಆದ್ದರಿಂದ **ನೀನು ಭವಿಷ್ಯತ್ತಿನಲ್ಲ ಬರುವ ಕಲಿಯುಗದಲ್ಲಿ ಕುಸುಮಶ್ರೇಷ್ಠಿಯೆಂಬ ವೈಶ್ಯಪ್ರಭುವಾಗಿ ಜನ್ಮಿಸುವೆ. ಆಗ ನಾನು ವಾಸವಿ ಕನ್ನಕೆಯ ಹೆಸರಿನಲ್ಲಿ ನಿನಗೆ ಕುಮಾರಿಯಾಗಿ ಹುಟ್ಟಿ ಅಧರ್ಮವನ್ನು ಅಡಗಿಸುವುದಕ್ಕೆ ಆತ್ಮಾರ್ಪಣೆ ಮಾಡಿಕೊಳ್ಳುವ ನೆಪದಲ್ಲಿ ಬಂಧುವರ್ಗಕ್ಕೂ ಮೋಕ್ಷವನ್ನು ಪ್ರಸಾದಿಸುವೆನು.** ಅಲ್ಲಿಯವರೆಗೂ ನೀನೂ ಮತ್ತು ನಿನ್ನ ಬಂಧುಗಳು ಮಹೋನ್ನತ ಪುಣ್ಯಪದವನ್ನು ಹೊಂದಿ ಸಮಸ್ತ ಸೌಖ್ಯಸಂಪದಗಳಿಂದ ಕಾಲಕಳೆಯಬಲ್ಲಿರಿ’ ಎಂದು ವರವಿತ್ತಳು. ಹೀಗೆ ದೇವಿಯು ಅವರು ಬೇಡಿದ ವರಗಳನ್ನು ಕೊಟ್ಟು ಅಂತರ್ಧಾನಳಾದಳು. ಸುರಥರಾಜನು ದೇವಿಯ ವರಪ್ರಭಾವದಿಂದ ರಾಜ್ಯವನ್ನು ಹೊಂದಿ ಮರುಜನ್ಮದಲ್ಲಿ ಸಾವರ್ಣಿ ಎಂಬ ಮನುವಾದನು. ಸಮಾಧಿ ವೈಶ್ಯನು ಆತ್ಮಜ್ಞಾನಸಂಪನ್ನನಾಗಿ ತಾನು ಹೊಂದಿದ ಜ್ಞಾನಸಂಪತ್ತನ್ನು ಅನೇಕರಿಗೆ ಹಂಚಿ ತನ್ನ ವಂಶಕ್ಕೂ ಸಮಾಜಕ್ಕೂ ಮೋಕ್ಷಮಾರ್ಗವನ್ನು ತೋರಿಸುತ್ತ ಕೊಂಚಕಾಲವಿದ್ದು ನಂತರದ ಜನ್ಮದಲ್ಲಿ ಕೈಲಾಸವಾಸಿಗಳಾದ ಸಿದ್ಧವೈಶ್ಯರ ನಾಯಕನಾಗಿ ಜನ್ಮಿಸಿದನು ಎಂದು ಸೂತಮುನಿಯು ಶೌನಕಾದಿ ಮಹರ್ಷಿಗಳಿಗೆ ಹೀಗೆ ಸಮಾಧಿಸುರಥರ ವೃತ್ತಾಂತವನ್ನು ಮತ್ತು ಶ್ರೀದೇವಿಯ ಮಹತ್ವವನ್ನು ತಿಳಿಸಿಕೊಟ್ಟನು.